98

# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 120 ವಿಎಸ್‌ಸಿ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13-07-2017

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
2656
15/07/17
ಬೆಂಗಳೂರು

## ಅಧಿಸೂಚನೆ

ವಿಷಯ: ಸೌರ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸುವ ಬಗ್ಗೆ.

ಉಲ್ಲೇಖ: ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್‌ರವರ ಮನವಿ ಪತ್ರ ಸಂಖ್ಯೆ:ಕೆ.ಆರ್.ಇ.ಡಿ/01/ ಆಡಳಿತ-ಪಮೂ-514/2017/3695 ದಿನಾಂಕ:03.06.2017.

********

ಸೌರ ವಿದ್ಯುತ್‌ನ್ನು ಪ್ರೋತ್ಸಾಹಿಸಲು ಸರ್ಕಾರವು ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ: 22.05.2014 ಮತ್ತು ತಿದ್ದುಪಡಿ ಸಂಖ್ಯೆ: ಇಎನ್ 49 ವಿಎಸ್‌ಸಿ 2016 ದಿನಾಂಕ: 12.01.2017ರಂತೆ ಸೌರ ನೀತಿ 2014-21ಅನ್ನು ಜಾರಿಗೊಳಿಸಿರುತ್ತದೆ. ಸದರಿ ನೀತಿಯನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯು ಸೌರ ನೀತಿಯ ಅನುಷ್ಠಾನಕ್ಕೆ ನೇಮಿತ ಪ್ರತಿನಿಧಿಯಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪ್ರಸ್ತಾವನೆ ದಿನಾಂಕ:03.06.2017ರಂತೆ 10ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆ ಸ್ಥಾಪಿಸಲು ಮೆ॥ ಪರಮಪೂಜ್ಯ ಸೋಲಾರ್ ಎನರ್ಜಿ ಪ್ರೈ. ಲಿ., ರವರಿಗೆ ಹಂಚಿಕೆ ನೀಡಿರುತ್ತದೆ. ಯಾದಗಿರಿ ಜಿಲ್ಲೆ, ಶೋರಾಪುರ ತಾಲ್ಲೂಕಿನ, ವನಕಿಹಾಳ ಗ್ರಾಮದಲ್ಲಿ 52-03 (ಎ-ಗು) ವಿಸ್ತೀರ್ಣದ ಖಾಸಗಿ ಜಮೀನುಗಳನ್ನು ಕರ್ನಾಟಕ ಭೂ ಸುಧಾರಣಾ ಅಧಿನಿಯಮದನ್ವಯ ಶಾಸನಬದ್ಧ ಅನುಮೋದನೆಗಳ ನಂತರ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯು ಗುತ್ತಿಗೆ ಆಧಾರದ ಮೇಲೆ ಸದರಿ ಜಮೀನುಗಳನ್ನು ಭೂಮಾಲೀಕರಿಂದ ಪಡೆದು ಭೂಮಿಗಳನ್ನು ಖಾಸಗಿ ಸೌರ ವಿದ್ಯುತ್ ಅಭಿವೃದ್ಧಿದಾರರಿಗೆ ನಿಯಮಾನುಸಾರ ಉಪಗುತ್ತಿಗೆ ನೀಡಲು ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 66 ವಿಎಸ್‌ಸಿ 2016 ದಿನಾಂಕ: 05.10.2016 ಮತ್ತು ಕರ್ನಾಟಕ ಭೂಕಂದಾಯ ಅಧಿನಿಯಮ (ತಿದ್ದುಪಡಿ), 2015 (ಕರ್ನಾಟಕ ಅಧಿನಿಯಮ 2015ರ ಸಂಖ್ಯೆ: 31)ರನ್ವಯ ಯಾದಗಿರಿ ಜಿಲ್ಲೆ, ಶೋರಾಪುರ ತಾಲ್ಲೂಕಿನ, ವನಕಿಹಾಳ ಗ್ರಾಮದಲ್ಲಿ ಅನುಬಂಧದಲ್ಲಿ ನಮೂದಿಸಿರುವ ಸರ್ವೆ ನಂಬರ್ ಹಾಗೂ ಭೂಮಾಲೀಕರ ಹೆಸರುಗಳನ್ನೊಳಗೊಂಡ 52-03 (ಎ-ಗು) ವಿಸ್ತೀರ್ಣದ ಖಾಸಗಿ ಜಮೀನುಗಳಲ್ಲಿ, ಸೌರ ವಿದ್ಯುತ್

MD KREDL
GM (Tech) I/C
KREDL
To - SG 18/7
Fwd to AO (Admin)
18/7
24/7/17

ಉತ್ಪಾದನಾ ಘಟಕಗಳನ್ನು ಅಳವಡಿಸುವ ಉದ್ದೇಶದಿಂದ, ಕರ್ನಾಟಕ ಭೂ ಸುಧಾರಣಾ ಅಧಿನಿಯಮದನ್ವಯ ಶಾಸನಬದ್ಧ ಅನುಮೋದನೆಗಳ ನಂತರ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯು ಗುತ್ತಿಗೆ ಆಧಾರದ ಮೇಲೆ ಜಮೀನುಗಳನ್ನು ಪಡೆದು ತರುವಾಯ ಜಮೀನುಗಳನ್ನು ಖಾಸಗಿ ಸೌರ ವಿದ್ಯುತ್ ಅಭಿವೃದ್ಧಿದಾರರಿಗೆ ನಿಯಮಾನುಸಾರ ಉಪಗುತ್ತಿಗೆಗೆ ನೀಡಲು ಸರ್ಕಾರ ಅನುಮತಿಸಿದೆ.

ಮುಂದುವರೆದು, ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಉಪಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ಜಮೀನುಗಳ ಮಾಲೀಕತ್ವ/ವಾರಸುದಾರರು, ಸರ್ವೆನಂಬರ್ ಇತ್ಯಾದಿ ದಾಖಲಾತಿಗಳನ್ನು ಪರಿಶೀಲಿಸಿ ಖಾತರಿಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

**ಇವರಿಗೆ,**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ, 50 ಪ್ರತಿಗಳನ್ನು ಇಂಧನ ಇಲಾಖೆ, ವಿಕಾಸಸೌಧ, ಇಲ್ಲಿಗೆ ಸರಬರಾಜು ಮಾಡತಕ್ಕದ್ದು.

**ಪ್ರತಿಗಳು:**

1. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿ., ಕಾವೇರಿ ಭವನ, ಬೆಂಗಳೂರು–560 009.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ. 39, "ಶಾಂತಿ ಗೃಹ" ಪ್ಯಾಲೆಸ್ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್, ಬೆಂಗಳೂರು–560 001.
4. ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ.
5. ಕಾರ್ಯದರ್ಶಿಗಳು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ನಂ. 9/2, 6ನೇ ಮತ್ತು 7ನೇ ಮಹಡಿ, ಮಹಾಲಕ್ಷ್ಮಿ ಛೇಂಬರ್ಸ್, ಎಂ.ಜಿ. ರಸ್ತೆ, ಬೆಂಗಳೂರು.
6. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ನಿರ್ದೇಶಕರು(ಆರ್ಥಿಕ), ಅಪರ ನಿರ್ದೇಶಕರು(ಇ.ಎಂ.ಸಿ–1), ಜಂಟಿ ನಿದೇಶಕರು(ಎನ್.ಸಿ.ಇ. 2&3), ಜಂಟಿ ನಿರ್ದೇಶಕರು(ಯೋಜನೆ), ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಶಾಖೆ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

(96)

**ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 120 ವಿಎಸ್‌ಸಿ 2017 ದಿನಾಂಕ:13.07.2017ಕ್ಕೆ ಅನುಬಂಧ**

**ಗ್ರಾಮ: ವನಕಿಹಾಳ, ತಾ: ಶೋರಾಪುರ, ಜಿಲ್ಲೆ: ಯಾದಗಿರಿ**

| ಕ್ರಸಂ | ಸರ್ವೆ ನಂ | ಭೂ ಮಾಲೀಕರ ಹೆಸರು | ವಿಸ್ತೀರ್ಣ (ಎ–ಗುಂ) |
|---|---|---|---|
| 1 | 44 | ನೀಲಮ್ಮ ಗಂ. ಅಮರಯ್ಯ ಹಿರೇಮಠ | 6–00 |
| | | ಚಿದಾನಂದ ತಂ. ಅಮರಯ್ಯ ಹಿರೇಮಠ | 6–00 |
| | | ಅಮರಯ್ಯ ತಂ. ಮುದ್ದಯ್ಯ ಹಿರೇಮಠ | 6–00 |
| 2 | 45 | ಅಮರಯ್ಯ ತಂ. ಮುದ್ದಯ್ಯ ಹಿರೇಮಠ | 12–16 |
| | | ಚಿದಾನಂದ ತಂ. ಅಮರಯ್ಯ ಹಿರೇಮಠ | 6–08 |
| 3 | 46 | ಅಮರಯ್ಯ ತಂ. ಮುದ್ದಯ್ಯ | 15–19 |
| | | **ಒಟ್ಟು** | **52–03** |

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಯಾದಗಿರಿ ಜಿಲ್ಲೆ, ಯಾದಗಿರಿ

(ದೂರವಾಣಿ ಸಂಖ್ಯೆ: 08473-253700, ಫ್ಯಾಕ್ಸ್ : 08473- 253701)

151

ಸಂ/ಕಂ/ಭೂಮಂ/123/2017-18 3307

ದಿನಾಂಕ:25-09-2018

ಗೆ,

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
#39, "ಶಾಂತಿಗೃಹ", ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ
ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕಚೇರಿ ಎದುರು
ಅರಮನೆ ರಸ್ತೆ ಬೆಂಗಳೂರು-001

ಸಂ. 4192 ದಿನಾಂಕ 01/10/18 ಬೆಂಗಳೂರು

ಮಾನ್ಯರೆ,

ವಿಷಯ :- ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ವಣಕಿಹಾಳ ಗ್ರಾಮದಲ್ಲಿ ಪರಮಪೂಜ್ಯ ಸೋಲಾರ್ ಎನರ್ಜಿ ಪ್ರೈ.ಲಿ.ರವರು 10 ಮೆ.ವ್ಯಾ ಸೌರ ವಿದ್ಯುತ್ ಘಟಕ ಸ್ಥಾಪಿಸುವ ಕುರಿತು.

ಉಲ್ಲೇಖ :- 1 ತಮ್ಮ ಕಾರ್ಯಲಯದ ಪತ್ರ ಕೆ.ಆರ್.ಇ.ಡಿ.ಎಲ್-01/ಆಡಳಿತ/ಪಪೂ-514/2018 ದಿನಾಂಕ:01.08.2018

2 ಸಹಾಯಕ ಕೃಷಿ ನಿರ್ದೇಶಕರು, ಸುರಪುರ ರವರ ಪತ್ರ ದಿನಾಂಕ:07.09.2018.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖಿತ(1)ರ ಪತ್ರದ ಮೂಲಕ ಮೆ॥ ಪರಮಪೂಜ್ಯ ಸೋಲಾರ್ ಎನರ್ಜಿ ಪ್ರೈ.ಲಿ.ರವರು ಸುರಪೂರ ತಾಲ್ಲೂಕಿನ ವಣಕಿಹಾಳ ಗ್ರಾಮದಲ್ಲಿ ಉದ್ದೇಶಿತ ಸೌರ ವಿದ್ಯುತ್ ಘಟಕ ಸ್ಥಾಪಿಸಲು ಖಾಸಗಿ ಭೂ ಮಾಲಿಕರಿಂದ ಜಮೀನುಗಳನ್ನು ಕ್ರೆಡೆಲ್ ಸಂಸ್ಥೆಯು ಗುತ್ತಿಗೆ ಪಡೆಯುವ ಸಲುವಾಗಿ ಸಂಭಂದಿಸಿದ ಭೂ ಮಾಲೀಕರುಗಳು ಹಾಗೂ ಸೌರಘಟಕ ಅಭಿವೃದ್ದಿ ಸಂಸ್ಥೆಯಾದ ಮೆ॥ ಪರಮಪೂಜ್ಯ ಸೋಲಾರ್ ಎನರ್ಜಿ ಪ್ರೈ.ಲಿ.ರವರು ಪ್ರತಿ ಎಕರೆಗೆ ವಾರ್ಷಿಕ ಗುತ್ತಿಗೆ ಮೊತ್ತ ರೂ.25,000/-ಗಳ ಮೂಲ ಗುತ್ತಿಗೆ ಮೊತ್ತ ಹಾಗೂ ಪ್ರತಿ ವರ್ಷವು ಹಿಂದಿನ ವರ್ಷದ ಗುತ್ತಿಗೆ ಮೊತ್ತದ ಶೇ.10 ರಷ್ಟನ್ನು ಹೆಚ್ಚಿಸಲು ಸದರಿ ಕಂಪನಿಯವರು ಭೂಮಾಲೀಕರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡಿರುತ್ತಾರೆ. ಸದರಿ ಕರಾರು ಒಪ್ಪಂದಕ್ಕೆ ಅನುಮೋದನೆ ನೀಡಲು ಕೋರಿರುತ್ತೀರಿ.

ಕಾರಣ, ಉಲ್ಲೇಖಿತ(2)ರ ಸಹಾಯಕ ಕೃಷಿ ನಿರ್ದೇಶಕರು, ಸುರಪುರ ವರದಿ, ಸದರಿ ಜಮೀನುಗಳ ಭೂ ಮಾಲೀಕರುಗಳು ಹಾಗೂ ಸೌರಘಟಕ ಅಭಿವೃದ್ದಿ ಸಂಸ್ಥೆಯಾದ ಮೆ॥ ಪರಮಪೂಜ್ಯ ಸೋಲಾರ್ ಎನರ್ಜಿ ಪ್ರೈ.ಲಿ.ರವರ ಒಪ್ಪಂದದಂತೆ ಪ್ರತಿ ಎಕರೆಗೆ ವಾರ್ಷಿಕ ಗುತ್ತಿಗೆ ಮೊತ್ತ ರೂ.25,000/-ಗಳ ಮೂಲ ಗುತ್ತಿಗೆ ಮೊತ್ತ ಹಾಗೂ ಪ್ರತಿ ವರ್ಷವು ಹಿಂದಿನ ವರ್ಷದ ಗುತ್ತಿಗೆ ಮೊತ್ತದ ಶೇ.10ರಷ್ಟನ್ನು ಹೆಚ್ಚಿಸಲು ಈ ಮೂಲಕ ಅನುಮತಿ ನೀಡಲಾಗಿದೆ.

[ಕಚೇರಿ ಟಿಪ್ಪಣಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದಿತ]

ತಮ್ಮ ವಿಶ್ವಾಸಿ,

25/09/18

ಅಪರ ಜಿಲ್ಲಾಧಿಕಾರಿಗಳು,
ಯಾದಗಿರಿ

MD KREDL 2054

1.10.18

GM (Tech) KREDL

D:/ND BACKUP/LETTERS/SAI/FORWARD LETTERS.DOC

(285)

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ,ಯಾದಗಿರಿ ಜಿಲ್ಲೆ.ಯಾದಗಿರಿ

(ದೂರವಾಣಿ ಸಂಖ್ಯೆ: 08473-253700, ಫ್ಯಾಕ್ಸ್ : 08473- 253701)

ಸಂ/ಕಂ/ಪಭಾ/ಭೂಸು/ಗ್ರಾಮೀಣ/35/2017-18 ದಿನಾಂಕ: 28 -06-2018

## ಅನುಬಂಧ-5

(ಸರ್ಕಾರದ ಸುತ್ತೋಲೆ ಸಂಖ್ಯೆ/ಆರ್.ಡಿ/7/ಎಲ್‌ಜಿಪಿ/95 ದಿ. 07/06/99 ರ ಅನ್ವಯ)

## :: ಅಧಿಕೃತ ಜ್ಞಾಪನ ::

ವಿಷಯ :- ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ವಣಕಿಹಾಳ ಗ್ರಾಮದ ವಿವಿಧ ಸರ್ವೆ ನಂಬರಗಳನ್ನು ಕೈಗಾರಿಕೆ (ಸೌರ ವಿದ್ಯುತ್ ಉತ್ಪಾದನಾ ಘಟಕ) ಉದ್ದೇಶಕ್ಕಾಗಿ ಪರಿಭಾವಿತ ಭೂಪರಿವರ್ತನೆ ಕುರಿತು.

ಉಲ್ಲೇಖ:-
1 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ರವರ ಪತ್ರ ದಿನಾಂಕ: 30.08.2017.
2 ಸರ್ಕಾರದ ಸುತ್ತೋಲೆ ಸಂ/ಆರ್‌ಡಿ/69/ಎಲ್‌ಜಿಪಿ/2015 ದಿನಾಂಕ: 01.12.2015
3 ಸರ್ಕಾರದ ಆದೇಶ ಸಂ/ಇಎನ್/66/ವಿಎಸ್‌ಇ/2016 ಬೆಂಗಳೂರು ದಿನಾಂಕ: 05.10.2016.
4 ಸರ್ಕಾರದ ಅಧಿಸೂಚನೆ ಸಂ/ಇಎನ್/163/ವಿಎಸ್‌ಸಿ/2017 ಬೆಂಗಳೂರು ದಿನಾಂಕ: 30.08.2017.
5 ತಹಶೀಲ್ದಾರರು, ಸುರಪುರ ಇವರ ವರದಿ ಸಂಖ್ಯೆ/ಕಂ/ಭೂಮಿ/29/2017-18 ದಿ: 14.11.2017.

*****

ಮೇಲ್ಕಂಡ ವಿಷಯಕ್ಕೆ ಸಂಭಂದಿಸದಂತೆ ಉಲ್ಲೇಖ(1)ರ ಮೂಲಕ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ವಣಕಿಹಾಳ ಗ್ರಾಮದಲ್ಲಿ 10 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ಥಾಪಿಸಲು ಪರಮಪೂಜ್ಯ ಸೋಲಾರ್ ಎನರ್ಜಿ ಪ್ರೈ.ಲಿ. ಬೆಂಗಳೂರು ಇವರಿಗೆ ಸದರಿ ಯೋಜನೆಗೆ ಅಗತ್ಯವಿರುವ 54-09 ಎಕರೆ/ಗುಂಟೆ ಜಮೀನುಗಳನ್ನು ಖರೀದಿ ಅಥವಾ ಗುತ್ತಿಗೆ ಆಧಾರದ ಮೇರೆಗೆ ಪಡೆದುಕೊಂಡು ಯೋಜನೆಯನ್ನು ಪ್ರಾರಂಭಿಸಲು ಅನುಮತಿ ನೀಡಿರುತ್ತಾರೆ.

ಉಲ್ಲೇಖ(2)ರ ಸರ್ಕಾರದ ಸುತ್ತೋಲೆ ಪ್ರಕಾರ ಕರ್ನಾಟಕ ಸೌರನೀತಿ 2014-21 ರನ್ವಯ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸಮರ್ಥ ಪ್ರಾಧಿಕಾರದ ಅನುಮತಿ ಪಡೆದು ಸೌರ ವಿದ್ಯುತ್ ಉತ್ಪಾದನಾ ಯೋಜನೆಯನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಬಳಸಲು ಅಪೇಕ್ಷಿಸಿ, ಪರಿವರ್ತನಾ ಹಾಗೂ ಇತರೆ ಶುಲ್ಕ ಪಾವತಿಯಡನೆ ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿದಲ್ಲಿ, ಸರ್ಕಾರದಿಂದ ಪಡೆದ ಅನುಮತಿ ಪತ್ರ, ಅರ್ಜಿದಾರರ ಹೆಸರಿನಲ್ಲಿರುವ ಪಹಣಿ ಪತ್ರಿಕೆ ಪಡೆದುಕೊಂಡು ಸದರಿ ಜಮೀನು ಪಿ.ಟಿ.ಸಿ.ಎಲ್ ಕಾಯ್ದೆ ಹಾಗೂ ಭೂ ಮಂಜೂರಾತಿ ಷರತ್ತುಗಳು ಉಲ್ಲಂಘನೆಯಾಗದಿರುವ ಬಗ್ಗೆ ಖಚಿತಪಡಿಸಿಕೊಂಡು ಸದರಿ ಜಮೀನನ್ನು ಪರಿಭಾವಿತ ಭೂ ಪರಿವರ್ತನೆಯ ಆದೇಶದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ನಿರ್ದೇಶನವಿರುತ್ತದೆ.

ಈ ಕೆಳಕಂಡ ಅರ್ಜಿದಾರರು ಪ್ರಸ್ತಾವಿತ ಜಮೀನನ್ನು ಸೌರ ವಿದ್ಯುತ್ ಯೋಜನೆಗಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರೊಂದಿಗೆ ಗುತ್ತಿಗೆ ಒಪ್ಪಂದ ಮಾಡಿಕೊಂಡಿದ್ದು, ಸದರಿಯವರು ಪರಮಪೂಜ್ಯ ಸೋಲಾರ್ ಎನರ್ಜಿ ಪ್ರೈ.ಲಿ. ಬೆಂಗಳೂರು ಇವರಿಗೆ (30) ವರ್ಷ ಅವಧಿಗೆ ಉಪ ಗುತ್ತಿಗೆ ಆಧಾರದ ಮೇರೆಗೆ ನೀಡಿರುತ್ತಾರೆ. ಉಲ್ಲೇಖ(5) ರ ಮೂಲಕ ತಹಸೀಲ್ದಾರರು ಸುರಪುರ ಇವರು ಪ್ರಸ್ತಾವಿತ ಜಮೀನು ಪಟ್ಟಾ ಜಮೀನಾಗಿದ್ದು ಕರ್ನಾಟಕ ಭೂ ಕಂದಾಯ ಕಾಯ್ದೆ, ಭೂ ಸುದಾರಣೆ ಕಾಯ್ದೆ, ಭೂ ಸ್ವಾಧೀನ ಕಾಯ್ದೆ, ಪಿ.ಟಿ.ಸಿ.ಎಲ್ ಕಾಯ್ದೆ ಹಾಗೂ ಭೂ ಮಂಜೂರಾತಿ ನಿಯಮಗಳಡಿ ಒಳಗೊಂಡಿರುವುದಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ.



Scanned by CamScanner

ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 95(2), 95(4) ಮತ್ತು 95(7)ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ಭೂಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ ಎಕರೆ ಒಂದಕ್ಕೆ ಕೈಗಾರಿಕೆ ಉದ್ದೇಶಕ್ಕಾಗಿ ರೂ.21,780/- (ರೂಪಾಯಿ ಇಪ್ಪತ್ತೊಂದು ಸಾವಿರದ ಏಳು ನೂರಾ ಎಂಬತ್ತು ಮಾತ್ರ)ಗಳಂತೆ ಹಣವನ್ನು ಎಸ್.ಬಿ.ಹೆಚ್ ಬ್ಯಾಂಕಿಗೆ ಜಮಾ ಮಾಡಿದ ಮೇರೆಗೆ ಈ ಕೆಳಕಂಡ ಅರ್ಜಿದಾರರ ಮನವಿಯನ್ನು ಪರಿಗಣಿಸಿ, ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ವಣಕಿಹಾಳ ಗ್ರಾಮದ ಈ ಕೆಳಕಂಡ ಸರ್ವೆ ನಂಬರಗಳ ವ್ಯವಸಾಯದ ಜಮೀನನ್ನು ವ್ಯವಸಾಯೇತರ ಕೈಗಾರಿಕೆ (ಸೌರ ವಿದ್ಯುತ್ ಉತ್ಪಾದನಾ ಘಟಕ) ಉದ್ದೇಶಕ್ಕಾಗಿ ಬಳಸಲು ಉಲ್ಲೇಖ(2) (3) & (4)ರ ಸರ್ಕಾರದ ಆದೇಶ ಹಾಗೂ ಉಲ್ಲೇಖ(5) ತಹಶೀಲ್ದಾರರ ವರದಿಯ ಆಧಾರದ ಮೇರೆಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಪರಿಭಾವಿತ ಭೂಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

| ಕ್ರಸ | ಅರ್ಜಿದಾರರ ಹೆಸರು | ಸರ್ವೆ ನಂಬರ | ವಿಸ್ತೀರ್ಣ | ಖರಾಬ ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ಭೂಪರಿವರ್ತನೆ ಮೊತ್ತ & ಪೋಡಿ ಶುಲ್ಕ | ಚಲನ್ ಸಂಖ್ಯೆ & ದಿನಾಂಕ |
|---|---|---|---|---|---|---|---|
| 1 | ಶ್ರೀಮತಿ ನೀಲಮ್ಮ ಗಂಡ ಅಮರಯ್ಯ | 44/*/* | 6–00 | – | 6–00 | ರೂ.1,30,720/- | ಚ.ಸಂ:032290778 ದಿ:10.05.2018 |
| 2 | ಶ್ರೀ ಚಿದಾನಂದ ತಂದೆ ಅಮರಯ್ಯ | 44/*/* 45/*/* | 12–08 | – | 12–08 | ರೂ.2,65,796/- | ಚ.ಸಂ:032117369 ದಿ:10.05.2018 |
| 3 | ಶ್ರೀ ಅಮರಯ್ಯಾ ತಂದೆ ಮುದ್ದಯ್ಯ | 44/*/* 45/*/* 46/*/* | 35–09 | 0–32 | 36–01 | ರೂ.10,95,145/- | ಚ.ಸಂ:031600143 ದಿ:01.03.2018 |

1) ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿ ಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಗ್ರಾಮ ಪಂಚಾಯತಿಯಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರರಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2) ಈ ಭೂ ಪರಿವರ್ತಿತ ಜಮೀನನ್ನು ಕೈಗಾರಿಕೆ (ಸೌರ ವಿದ್ಯುತ್ ಉತ್ಪಾದನಾ ಘಟಕ) ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3) ಇತರೆ ಅವಶ್ಯವಾದ ರಸ್ತೆ ಜಾಗ, ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ಸಹಾಯಕ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ ಯಾದಗಿರಿ ಇವರಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

4) ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿನ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯಗಳ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

5) ಸರ್ಕಾರದ ಆದೇಶ ಸಂ. ಪಿಡಬ್ಲೂಡಿ 7556-665-ಆರ್ ಮತ್ತು ಜಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ಸಂ. ಪಿ 1:7(11) 67, ದಿನಾಂಕ: 01.01.1966 ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯ ಭಾಗದಿಂದ 40 ಮೀಟರಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯ ಭಾಗದಿಂದ 25 ಮೀಟರಗಳ ಅಂತರವನ್ನು ಕಾಯ್ದಿರಿಸಬೇಕು. ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

S A Order doc

Scanned by CamScanner

6) ಅರ್ಜಿದಾರರು ನಗರ ಭೂ ಪರಿಮಿತಿ ಕಾಯ್ದೆ 1976 ವಿಧಿ 6(1) ರ ಪ್ರಕಾರ ಸಕ್ಷಮ ಪ್ರಾಧಿಕಾರದಲ್ಲಿ ಘೋಷಣೆ ಪತ್ರವನ್ನು ಸಲ್ಲಿಸದಿದ್ದಲ್ಲಿ ಈಗ ಅಂತಹ ಘೋಷಣೆ ಪತ್ರವನ್ನು ಸಲ್ಲಿಸತಕ್ಕದ್ದು ಮತ್ತು ಈ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಭೂ ಪರಿಮಿತಿ ಪ್ರಾಧಿಕಾರಕ್ಕೆ ಕಳುಹಿಸಲಾಗಿದೆ.

7) ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವದು. ಮತ್ತು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

8) ಸದರಿ ಪ್ರಕರಣದಲ್ಲಿ ಅರ್ಜಿದಾರರು ಸಲ್ಲಿಸಿದ ದಾಖಲೆಗಳು ಮತ್ತು ವಿವಿಧ ಇಲಾಖೆಗಳ ಅಭಿಪ್ರಾಯಗಳಲ್ಲಿ ಲೋಪ, ಸುಳ್ಳು ಎಂದು ಕಂಡುಬಂದಲ್ಲಿ ಸದರಿ ಆದೇಶವನ್ನು ನಿಮಗೆ ಮಾಹಿತಿ ನೀಡದೇ ರದ್ದುಗೊಳಿಸಿ, ನಿಮ್ಮ ಮೇಲೆ ಕ್ರಮ ಕೈಗೊಳ್ಳಲಾಗುವುದು.

9) ಪ್ರಸ್ತಾವಿತ ಜಮೀನನ್ನು ಕೋರಿದ ಉದ್ದೇಶಕ್ಕಾಗಿ (01) ವರ್ಷದ ಒಳಗಾಗಿ ಬಳಸಿಕೊಳ್ಳತಕ್ಕದ್ದು. ಒಂದು ವೇಳೆ ಬಳಸಿಕೊಳ್ಳದಿದ್ದಲ್ಲಿ, ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

10) ವ್ಯವಸ್ಥಾಪಕ ನಿರ್ದೇಶಕರು, ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ವಿಧಿಸುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಜಿಲ್ಲಾಧಿಕಾರಿಗಳು,
ಯಾದಗಿರಿ

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ:-

1 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, #39, ಶಾಂತಿ ಗೃಹ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ, ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕಚೇರಿ ಎದುರು, ಅರಮನೆ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

2 ಸಹಾಯಕ ಆಯುಕ್ತರು, ಯಾದಗಿರಿ ಇವರಿಗೆ ಮಾಹಿತಿಗಾಗಿ.

3 ಉಪ ನಿರ್ದೇಶಕರು, ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆ, ಯಾದಗಿರಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

4 ತಹಶೀಲ್ದಾರರು, ಶಹಾಪುರ ಇವರಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂಪರಿವರ್ತನೆಯಾಗಿದೆ ಎಂದು ಆರ್.ಟಿ.ಸಿ.ಯಲ್ಲಿ ನಮೂದಿಸತಕ್ಕದ್ದು, ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂಕಂದಾಯವನ್ನು ಕಡಿಮೆಗೊಳಿಸುವದು ಹಾಗೂ ನಮೂದಿಸಿದ ಪರಿಷ್ಕೃತ ಪಹಣಿ ಪತ್ರಿಕೆಯನ್ನು (7) ದಿವಸಗಳೊಳಗಾಗಿ ಈ ಕಾರ್ಯಾಲಯಕ್ಕೆ ತಪ್ಪದೇ ಸಲ್ಲಿಸಲು ಸೂಚಿಸಿದೆ.

5 ಕ್ರ.ಸಂ.01 ರಿಂದ 44ರ ಅರ್ಜಿದಾರರಿಗೆ ಮಾಹಿತಿಗಾಗಿ.

6 ಪರಮಪೂಜ್ಯ ಸೋಲಾರ್ ಎನರ್ಜಿ ಪ್ರೈ.ಲಿ., ನಂ.160, ಓಂ ಚೇಂಬರ್ಸ್, 2ನೇ ಮಹಡಿ, ಟೋಟಲ್ ಗ್ಯಾಸ್ ಪಂಪ್ ಹತ್ತಿರ, 1ನೇ ಮುಖ್ಯ ರಸ್ತೆ ಶೇಷಾದ್ರಿಪುರಂ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

7 ಹೆಚ್ಚಿನ ಪ್ರತಿ

ಜಿಲ್ಲಾಧಿಕಾರಿಗಳು,
ಯಾದಗಿರಿ

Scanned by CamScanner